

بِسۡمِ اللّٰهِ الرَّحۡمٰنِ الرَّحِیۡمِ

# ಲೋಕವು ಇಂದಿನ ಭಯಾನಕ ಸ್ಥಿತಿಯಿಂದ ರಕ್ಷಣೆ ಹೊಂದಲು ಪ್ರಾರ್ಥನೆ ಒಂದೇ ಮಾರ್ಗ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 30-06-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ರಮಝಾನ್ ತಿಂಗಳು ತನ್ನ ಅಸಂಖ್ಯಾತ ಅನುಗ್ರಹಗಳೊಂದಿಗೆ ಅಗಮಿಸುತ್ತದೆ. ಈ ವಾಸ್ತವಿಕತೆಯನ್ನು ಅರಿತುಕೊಂಡವರು ಅವುಗಳಿಂದ ಅನುಗ್ರಹಗಳನ್ನು ಪಡೆಯುತ್ತಾರೆ. ಬಹಳ ಜನರು ನನಗೆ ಪತ್ರ ಬರೆದಿದ್ದಾರೆ ಮತ್ತು ಬರೆಯುತ್ತಾ ಇದ್ದಾರೆ. ರಮಝಾನ್ ತಿಂಗಳಲ್ಲಿ ಫರ್ಝ್ ಆರಾಧನೆಗಳನ್ನು ಉತ್ತಮ ರೀತಿಯಲ್ಲಿ ಅನುಷ್ಠಿಸುವುದರೊಂದಿಗೆ ನಫ್ಲ್ ಆರಾಧನೆಗಳನ್ನು ಸಹ ಮಾಡುವ ಭಾಗ್ಯ ನಮಗೆ ಲಭಿಸಿತು ಎಂದು ಅವರು ಬರೆದಿದ್ದಾರೆ. ಇದೇ ರೀತಿ ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ದರ್ಸ್ ಆಲಿಸುವ ಭಾಗ್ಯ ಲಭಿಸಿತು, ತರಾವೀಹ್ ನಮಾಝ್ ಅನುಷ್ಠಿಸುವ ಮತ್ತು ಅನಂತರ ತಹಜ್ಜುದ್ ನಮಾಝ್ ಅನುಷ್ಠಿಸುವ ಭಾಗ್ಯ ಸಹ ಲಭಿಸಿತು, ಪವಿತ್ರ ಖುರ್‌ಆನ್ ಪೂರ್ಣವಾಗಿ ಓದಿ ಮುಗಿಸುವ ಭಾಗ್ಯ ಸಹ ಲಭಿಸಿತು ಎಂದು ಅವರು ಬರೆದಿದ್ದಾರೆ. ಅವರು ಹೀಗೆ ಸಹ ಬರೆದಿದ್ದಾರೆ: ಆದುದರಿಂದ ನಮ್ಮ ಈ ಸ್ಥಿತಿ ಯಾವಾಗಲೂ ನೆಲೆ ನಿಲ್ಲುವಂತೆ ನಮಗೋಸ್ಕರ ಪ್ರಾರ್ಥಿಸಿರಿ. ನಮಗೆ ಅಲ್ಲಾಹನು ದಯಪಾಲಿಸಿದ ಆಧ್ಯಾತ್ಮಿಕ ರಸಾನುಭೂತಿಗಳು ನಮ್ಮ ನಿರ್ಲಕ್ಷ್ಯತೆಯ ಕಾರಣದಿಂದ ಅಥವಾ ಬಲಹೀನತೆಗಳ ಕಾರಣದಿಂದ ಮತ್ತು ನಮ್ಮ ಯಾವುದಾದರೂ ತಪ್ಪಿನ ಕಾರಣದಿಂದ ನಮಗೆ ನಷ್ಟವಾಗದಿರಲಿ ಎಂದು ಪ್ರಾರ್ಥಿಸುವಂತೆಯೂ ಅವರು ಬರೆದಿದ್ದಾರೆ. ರಮಝಾನಿನ ಅನುಗ್ರಹಗಳನ್ನು ಗಳಿಸಲು ಪ್ರಯತ್ನಿಸಿದವರಲ್ಲಿ ಯಾವುದಾದರೂ ಬಲಹೀನತೆಗಳು ಇದ್ದಲ್ಲಿ ಅಲ್ಲಾಹನು ಕೇವಲ ತನ್ನ ಅನುಗ್ರಹದ ಕಾರಣದಿಂದ ಅವುಗಳನ್ನು ಕಡೆಗಣಿಸಿ ಅವರ ಪ್ರಯತ್ನಗಳನ್ನು ಅನುಗ್ರಹಿಸುವವನಾಗಲಿ. ಅಲ್ಲಾಹನು ತನ್ನ ಅನುಗ್ರಹ ಮತ್ತು ಕ್ಷಮೆಯ ಕಾರಣದಿಂದ ನೀಡಿದ ಪಾರಿತೋಷಿಕಗಳನ್ನು ಜಾರಿಯಲ್ಲಿರಿಸುವವನಾಗಲಿ.

ಪ್ರತಿಯೊಬ್ಬನು ಸಹ ತನಗೋಸ್ಕರ ಪ್ರಾರ್ಥಿಸಬೇಕಾಗಿದೆ. ನಮ್ಮ ಹೆಜ್ಜೆಗಳು ಹಿಂದಕ್ಕೆ ಸರಿಯಬಾರದು. ನಾವು ಯಾವಾಗಲೂ ಮುಂದೆ ಸಾಗುತ್ತಾ ಇರಬೇಕು. ನಾವು ಹುಖೂಖುಲ್ಲಾಹ್ ಮತ್ತು ಹುಖೂಖುಲ್ ಇಬಾದ್‌ಗಳನ್ನು ಈಡೇರಿಸಲು ನಾವು ತಲಪಿರುವಲ್ಲಿಂದ ಸಹ ನಮ್ಮ ಪಾದ ಹಿಂದಕ್ಕೆ ಸರಿಯಬಾರದು. ಮತ್ತು ಮುಂದೆ ಸಾಗುತ್ತಾ ಇರಬೇಕು. ಅಲ್ಲಿಯೇ ನಾವು ನಿಲ್ಲಲು ಪ್ರಯತ್ನಿಸದೆ ಅಲ್ಲಾಹನಿಂದ ಸಾಮರ್ಥ್ಯವನ್ನು ಬೇಡಿಕೊಳ್ಳುತ್ತಾ ನಮ್ಮ ಶಕ್ತಿಗಳಿಗೆ ಅನುಸಾರವಾಗಿ ಮುಂದೆ ಸಾಗಲು ಪ್ರಯತ್ನ ಮಾಡುತ್ತಾ ಇರಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ ಎಂದು ಪ್ರಾರ್ಥಿಸುತ್ತಾ ಇರಬೇಕು. ಅಲ್ಲಾಹನು ವಿವಿಧ ರೀತಿಗಳಲ್ಲಿ ಮನುಷ್ಯರನ್ನು ಪ್ರಾರ್ಥನೆಯ ಕಡೆಗೆ ಗಮನ ಹರಿಸಿರುವನು. ಅಲ್ಲಾಹನು ಹೇಳಿರುವನು: ನಾನು ನಿಮ್ಮ ಸಮೀಪಕ್ಕೆ ಬರುತ್ತೇನೆ. ಕೇವಲ ರಮಝಾನ್ ತಿಂಗಳ ಬಗ್ಗೆ ಮಾತ್ರವಲ್ಲ, ಯಾರು ಗಾಬರಿಗೊಂಡು ನನ್ನ ಕಡೆಗೆ ಪ್ರಾರ್ಥಿಸುತ್ತಾ ಆಗಮಿಸುತ್ತಾನೋ ನಾನು ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆ. ಅಲ್ಲಾಹನು ಹೇಳುತ್ತಾನೆ:

**ಅಮ್ಮನ್ ಯುಜೀಬುಲ್ ಮುಝ್‌ತರ್ರ ಇದಾ, ದಆಹು ವ ಯಕ್‌ಶಿಫುಸ್ಸೂಅ.** ಸಂಕಷ್ಟಕ್ಕೆ ಗುರಿಯಾದವನು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಗೆ ಉತ್ತರ ನೀಡುವವನೂ ಕಷ್ಟಗಳನ್ನು ಹೋಗಲಾಡಿಸುವವನೂ ಯಾರು? (ಪವಿತ್ರ ಖುರ್‌ಆನ್ 27:63). ಅಲ್ಲಾಹನು ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾನೆ: **ಉದ್‌ಊನೀ ಅಸ್‌ತಜಿಬ್‌ಲಕುಮ್.** ನೀವು ನನ್ನನ್ನು ಬೇಡಿಕೊಳ್ಳಿರಿ. ನಾನು ನಿಮ್ಮ ಪ್ರಾರ್ಥನೆಗಳನ್ನು ಆಲಿಸುವೆನು.

ನಾವು ರಮಝಾನಿನಲ್ಲಿ ಗಳಿಸಿದ ಆಧ್ಯಾತ್ಮಿಕ ಅನುಗ್ರಹಗಳು, ನಾವು ಅಲ್ಲಾಹನ ಸಾಮೀಪ್ಯ ಗಳಿಸಿದುದು ಮತ್ತು ಪ್ರಾರ್ಥನೆ ಅಂಗೀಕರಿಸಲ್ಪಟ್ಟದ್ದಾಗಿ ನಾವು ಕಂಡ ದೃಶ್ಯಗಳು, ಅಲ್ಲಾಹನು ನಮಗೆ ಮನವರಿಕೆ ಮಾಡಿಕೊಡಲು ಪ್ರಕಟಿಸಿದವುಗಳಾಗಿವೆ. ನಾನು ನಿಮಗೆ ನೀಡಿದ ಸಾಮೀಪ್ಯವನ್ನು ನೀವು ಸ್ಥಿರವಾಗಿ ಪಡೆಯಲು ಪ್ರಯತ್ನಿಸಬೇಕೆಂದು ಅವನು ಇಚ್ಛಿಸುತ್ತಾನೆ. ಅಲ್ಲಾಹನು ರಮಝಾನ್ ತಿಂಗಳಲ್ಲಿ ಮಾತ್ರ ಸಾಮೀಪ್ಯ ದಯಪಾಲಿಸುವವನಾಗಲು ಬದ್ಧನಾಗಿರುವುದಿಲ್ಲ. ಒಬ್ಬನು ಸತ್ಕರ್ಮ ಮಾಡಿದರೂ ಮಾಡದಿದ್ದರೂ ರಮಝಾನ್ ತಿಂಗಳಲ್ಲಿಯೇ ಅವನಿಗೆ ಸಾಮೀಪ್ಯ ದಯಪಾಲಿಸಬೇಕೆಂಬ ಬದ್ಧತೆ ಅಲ್ಲಾಹನಿಗಿಲ್ಲ. ಅಲ್ಲಾಹನು ರಮಝಾನ್ ತಿಂಗಳ ದಿನಗಳಿಗೆ ವೈಶಿಷ್ಟ್ಯ ನೀಡಿದುದು ಆ ದಿನಗಳಲ್ಲಿ ಇವುಗಳ ಬಗ್ಗೆ ಹೆಚ್ಚಿನ ಗಮನ ಹರಿಸಲಿಕ್ಕಾಗಿದೆ.

ರಮಝಾನಿನ ದಿನಗಳಲ್ಲಿ ಬಹಳ ಜನರಿಗೆ ನಫ್ಲ್ ನಮಾಝ್ ನಿರ್ವಹಿಸುವ ಅಭ್ಯಾಸವಾಗಿರುತ್ತದೆ. ಈ ಅಭ್ಯಾಸವನ್ನು ಅವರು ನೆಲೆ ನಿಲ್ಲಿಸುವುದಾದರೆ ಮತ್ತು ಅದಕ್ಕೋಸ್ಕರ ಪ್ರಾರ್ಥನೆ ಸಹ ಮಾಡುವುದಾದರೆ ಮತ್ತು ದೃಢ ನಿರ್ಧಾರ ಮಾಡಿ ನಿದ್ರಿಸಲು ತೊಡಗುವುದಾದರೆ ಅವರು ಯಾವಾಗಲೂ ಅಲ್ಲಾಹನ ಸಾಮೀಪ್ಯ ಗಳಿಸುವ ಭಾಗ್ಯ ಪಡೆಯುವರು. ಒಬ್ಬನಿಗೆ ಅಲ್ಲಾಹನ ಸಾಮೀಪ್ಯ ಲಭಿಸಿದರೆ ಅವನು ಅಲ್ಲಾಹನ ಆಶ್ರಯ ಪಡೆಯುತ್ತಾನೆ. ಅವನು ಅಲ್ಲಾಹನ ಸಂರಕ್ಷಣೆಯ ಕೋಟೆಯೊಳಗಿರುತ್ತಾನೆ. ಅಲ್ಲಾಹನ ಈ ಸಾಮೀಪ್ಯ ರಾತ್ರಿ ಹೊತ್ತು ಮಾಡುವ ಪ್ರಾರ್ಥನೆಗಳೊಂದಿಗೆ ಹಗಲು ಹೊತ್ತಿನಲ್ಲಿ ಮಾಡುವ ಆರಾಧನೆ ಮತ್ತು ಝಿಕ್ರ್‌ನಿಂದ ಲಭಿಸುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝಿಕ್ರ್ ಮಾಡುವವರ ಮತ್ತು ಝಿಕ್ರ್ ಮಾಡದವರ ಮಧ್ಯೆ ಇರುವ ವ್ಯತ್ಯಾಸದ ಬಗ್ಗೆ ಎಚ್ಚರಿಕೆ ನೀಡುತ್ತಾ ಆ ವ್ಯತ್ಯಾಸವನ್ನು ಜೀವದಿಂದಿರುವವರ ಮತ್ತು ಮೃತರಾದವರ ಮಧ್ಯೆ ಇರುವ ವ್ಯತ್ಯಾಸದ ಹಾಗಿದೆ ಎಂದು

ಹೇಳಿದ್ದಾರೆ. ಜೀವಿಸಿರಲಿಕ್ಕಾಗಿ ಈ ಸಾಮಗ್ರಿಯನ್ನು ಅಲ್ಲಾಹನು ವರ್ಷವಿಡೀ ನಮಗೆ ಒದಗಿಸಿದ್ದಾನೆ. ಅವನ ಸಾಮೀಪ್ಯ ಗಳಿಸಲು ಸಹಾಯಕವಾಗುವ ಸಾಮಗ್ರಿಗಳನ್ನು ಅವನು ನಮಗೆ ವರ್ಷವಿಡೀ ನೀಡಿದ್ದಾನೆ. ಪ್ರಾರ್ಥನೆ ಅಂಗೀಕರಿಸಲ್ಪಡುವುದಕ್ಕಾಗಿ ಆವಶ್ಯಕವಾದ ಸಾಮಗ್ರಿಯನ್ನು ಅಲ್ಲಾಹನು ಪ್ರತಿ ಸಮಯ ಒದಗಿಸಿದ್ದಾನೆ. ಆದುದರಿಂದ ಕೇವಲ ಕೆಲವು ದಿನಗಳ ಕಾಲಕ್ಕೆ ಮಾತ್ರ ಅಲ್ಲಾಹನ ಝಿಕ್ರ್ ಮಾಡಿ ಉಳಿದ ದಿನಗಳಲ್ಲಿ ಅಲ್ಲಾಹನ ಮಾತುಗಳ ಕಡೆಗೆ ಗಮನ ಹರಿಸದಿರುವುದು ಮನುಷ್ಯನನ್ನು ಮೃತನನ್ನಾಗಿ ಮಾಡುತ್ತದೆ.

ರಮಝಾನ್ ತಿಂಗಳಲ್ಲಿ ಭದ್ರಕೋಟೆಯೊಳಗೆ ಪ್ರವೇಶಿಸಲು ಪ್ರಯತ್ನ ಮಾಡಿ ಅದರಲ್ಲಿ ಆಶ್ರಯ ಪಡೆದಿದ್ದರೆ ನಾವು ಮಾಡಬೇಕಾದುದೇನೆಂದರೆ ಈ ಆಶ್ರಯದಲ್ಲಿ ಮುಂದುವರಿಯಲು ನಾವು ಎಲ್ಲ ರೀತಿಯಲ್ಲಿಯೂ ಜಾಗರೂಕರಾಗಿರಬೇಕು. ನಮ್ಮ ಯಾವುದಾದರೂ ನಿರ್ಲಕ್ಷ್ಯತೆಯ ಕಾರಣದಿಂದ ನಾವು ಈ ಕೋಟೆಯಿಂದ ಹೊರಗೆ ಬಂದು ನಮ್ಮ ಅತ್ಯಂತ ಕಡು ಶತ್ರುವಿನ ವಶಕ್ಕೊಳಗಾಗುವಂತಾಗಬಾರದು. ಆದುದರಿಂದ ಪ್ರಾರ್ಥನೆ ಮಾಡುತ್ತಾ ಸತ್ಕರ್ಮಗಳನ್ನು ಮಾಡುವ ಬಗ್ಗೆ ವಿಶಿಷ್ಟ ಲಕ್ಷ್ಯ ನೀಡುವುದು ಆವಶ್ಯಕವಾಗಿದೆ. ಆ ಮೂಲಕ ನಾವು ಪ್ರತಿಯೊಂದು ಕ್ಷಣದಲ್ಲಿ ಸಹ ಅಲ್ಲಾಹನು ನೀಡಿದ ಆಶ್ರಯದಲ್ಲಿ ಜೀವಿಸಬಹುದು. ಆದುದರಿಂದ ಪ್ರಾರ್ಥನೆಗಳನ್ನು ಮತ್ತು ದೇವನಾಮ ಸ್ಮರಣೆಯನ್ನು ಹೆಚ್ಚು ಹೆಚ್ಚಾಗಿ ಮಾಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಅತ್ಯಂತ ನಿರಾವಲಂಬಿಯಾಗಿದ್ದಾನೆ. ಬಹಳ ಹೆಚ್ಚು ಸಾರಿ, ಪದೇ ಪದೇ ಅಳಲಿನೊಂದಿಗೆ ಅವನನ್ನು ಪ್ರಾರ್ಥಿಸದಿದ್ದರೆ ಅವನು ಲಕ್ಷಿಸಲಾರನು. ನೋಡಿರಿ, ಒಬ್ಬನ ಪತ್ನಿ ಅಥವಾ ಮಗು ರೋಗಿಯಾದಾಗ ಅಥವಾ ಒಂದು ಕಠಿಣ ಮೊಕದ್ದಮೆ ಅವನ ವಿರುದ್ಧ ದಾಖಲಾದರೆ ಅವನು ಎಷ್ಟು ಆತಂಕ ಭರಿತನಾಗುತ್ತಾನೆ. ಆದುದರಿಂದ ಪ್ರಾರ್ಥನೆ ಮಾಡುವಾಗ ಅದೇ ರೀತಿಯ ಸತ್ಯವಾದ ಬೇಗುದಿ ಮತ್ತು ಅಳಲು ಎಲ್ಲಿಯ ತನಕ ಹುಟ್ಟುವುದಿಲ್ಲವೋ ಅಲ್ಲಿನ ತನಕ ಅದು ನಿಷ್ಪ್ರಯೋಜಕವಾಗುತ್ತವೆ. ಆದುದರಿಂದ ಪ್ರಾರ್ಥನೆ ಅಂಗೀಕಾರ ಪಡೆಯಲು ಹೃತ್ಪೂರ್ವಕ ಅಳಲು ಆವಶ್ಯಕವಾಗಿದೆ. ಅದು ಪ್ರಾರ್ಥನೆ ಅಂಗೀಕಾರಕ್ಕೆ ಆವಶ್ಯಕವಾದ ಶರತ್ತಾಗಿದೆ. ಮನುಷ್ಯನು ಪ್ರಾರ್ಥನೆಯನ್ನು ಕೇವಲ ಬಾಯಿಮಾತಿನಿಂದ ಅಥವಾ ಮೇಲಿಂದ ಮೇಲೆ ಮಾಡಬಾರದು. ಅದರಲ್ಲಿ ಒಂದು ಅಸ್ವಸ್ಥತೆ, ಗಾಬರಿ ಇರಬೇಕು ಪ್ರಾರ್ಥನೆಯ ಕಾಲದಲ್ಲಿ.

ನಾವು ಮಾಡಬೇಕಾದ ಕೆಲಸವೇನೆಂದರೆ ನಾವು ನಮ್ಮ ವೈಯ್ಯಕ್ತಿಕ ವಲಯದಿಂದ ಹೊರಗೆ ಬಂದು ಜಮಾಅತ್‌ಗೋಸ್ಕರ ಬಹಳ ಪ್ರಾರ್ಥನೆ ಮಾಡಬೇಕು. ಮುಸ್ಲಿಮ್ ಸಮುದಾಯಕ್ಕೋಸ್ಕರ ಸಹ ಬಹಳ ಪ್ರಾರ್ಥನೆ ಮಾಡಬೇಕು. ನಿಮ್ಮ ದೇಶಕ್ಕೋಸ್ಕರ ಸಹ ಪ್ರಾರ್ಥಿಸಬೇಕು. ಲೋಕದ ಮುಂದೆ ತೂಗಾಡುತ್ತಿರುವ ಭಯಾನಕ ಅಪಾಯಗಳು ದೂರ ಸರಿದು ಹೋಗಲಿಕ್ಕೂ ಪ್ರಾರ್ಥಿಸಬೇಕು. ನೀವು ಹೃತ್ಪೂರ್ವಕವಾದ ನೋವಿನೊಂದಿಗೆ ಪ್ರಾರ್ಥಿಸಿರಿ. ಪ್ರಾರ್ಥನೆಗಳನ್ನು ತನ್ನ ಬಗ್ಗೆ ಮಾತ್ರ ಸೀಮಿತಗೊಳಿಸದೆ ಅದನ್ನು ವಿಶಾಲಗೊಳಿಸುವುದು ಸಹ ಅಲ್ಲಾಹನ ಸಾಮೀಪ್ಯ ಗಳಿಸುವ ಒಂದು ಮಾರ್ಗವಾಗಿದೆ. ಪ್ರತಿಯೊಬ್ಬ ಅಹ್ಮದಿ ತನ್ನ ಪ್ರಾರ್ಥನೆಯಲ್ಲಿ ಜಮಾಅತನ್ನು ಸೇರಿಸುವುದು ಕಡ್ಡಾಯವಾಗಿದೆ. ಪಾಕಿಸ್ಥಾನದಲ್ಲಿ ಜಮಾಅತಿನ ಜನರ ಸ್ಥಿತಿ ಪ್ರತಿಯೊಬ್ಬರಿಗೆ ತಿಳಿದಿದೆ. ಅವರಿಗೋಸ್ಕರ ಪ್ರಾರ್ಥಿಸುವುದು ಬಹಳ ಆವಶ್ಯಕವಾಗಿದೆ. ಪಾಕಿಸ್ಥಾನದಲ್ಲಿ ವಾಸಿಸುವ ಅಹ್ಮದಿಯರು ತಮಗೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸುವ ಆವಶ್ಯಕತೆ ಇದೆ.

ಅದೇ ರೀತಿ ಅಲ್‌ಜೀರಿಯಾದಲ್ಲಿ ಸಹ ಜಮಾಅತಿನ ವಿರುದ್ಧ ಒಂದು ಯೋಜನೆಯ ಪ್ರಕಾರ ಕಾರ್ಯಗಳು ನಡೆಯುತ್ತಿವೆ. ಆದರೆ ಅಲ್ಲಿ ಒಬ್ಬಿಬ್ಬರ ಹೊರತು ಎಲ್ಲರೂ ತಮ್ಮ ವಿಶ್ವಾಸದಲ್ಲಿ ದೃಢಚಿತ್ತರಾಗಿದ್ದಾರೆ. ಅವರು ನನಗೆ ಬರೆಯುತ್ತಾರೆ, ನೀವು ಚಿಂತೆ ಹೊಂದಬೇಡಿರಿ, ನಾವು ಪ್ರತಿಯೊಂದು ರೀತಿಯ ಬಲಿದಾನ ನೀಡಲು ಸಿದ್ಧರಾಗಿದ್ದೇವೆ ಎಂದು. ಅಲ್ಲಿನ ಸರಕಾರಕ್ಕೆ ಅರ್ಥವಾಗುವುದಿಲ್ಲ– ಇವರೆಂತಹ ಜನರು, ಇವರು ತೀವ್ರ ಪ್ರತಿಭಟನೆ ಮಾಡುವುದೂ ಇಲ್ಲ, ವಿಶ್ವಾಸವನ್ನು ಕೈ ಬಿಡುವುದೂ ಇಲ್ಲ ಎಂದು. ಮಹಿಳೆಯರೂ ಪುರುಷರೂ ಶಿಕ್ಷೆ ಅನುಭವಿಸಲು ಸಿದ್ಧರಾಗಿದ್ದಾರೆ. ಆದರೆ ತಮ್ಮ ವಿಶ್ವಾಸವನ್ನು ಬಿಡಲು ಸಿದ್ಧರಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಅಹ್ಮದಿಯರ ಕೈಯಲ್ಲಿ ಪ್ರಾರ್ಥನೆ ಎಂಬ ಆಯುಧ ಇದೆ. ಮತ್ತು ಅಲ್ಲಾಹನ ಅನುಗ್ರಹದ ಬಗ್ಗೆ ದೃಢ ನಂಬಿಕೆ ಇದೆ. ಇದು ಪರೀಕ್ಷೆಯ ಕಾಲವೆಂದೂ ಒಂದೊಮ್ಮೆ ಅದು ಕೊನೆಗೊಳ್ಳುವುದೆಂದೂ ಅಲ್ಲಾಹನು ಖಂಡಿತವಾಗಿಯೂ ನಮ್ಮ ಪ್ರಾರ್ಥನೆ ಆಲಿಸುವನೆಂದೂ ಅವರು ದೃಢವಾಗಿ ನಂಬುತ್ತಾರೆ. ಒಟ್ಟಿನಲ್ಲಿ ಆವಶ್ಯಕವಾದುದೇನೆಂದರೆ ನಾವು ಅಲ್ಲಾಹನ ಭದ್ರಕೋಟೆಯಲ್ಲಿ ಆಶ್ರಯ ಪಡೆಯಲು ನಾವು ನಮ್ಮ ಪ್ರಾರ್ಥನೆಗಳನ್ನೂ ಧಿ಼ಕ್ರ್‌ಗಳನ್ನೂ ನೆಲೆ ನಿಲ್ಲಿಸಬೇಕಲ್ಲದೆ ಅವುಗಳನ್ನು ವರ್ಧಿಸಬೇಕು. ಪ್ರತಿಯೊಬ್ಬ ಅಹ್ಮದಿ ಪ್ರಾರ್ಥನೆಯ ಕಡೆಗೆ ಗಮನ ಹರಿಸಬೇಕು.

ನಮಗೆ ನೇರವಾಗಿ ಯಾವುದೇ ಅಪಾಯವಿಲ್ಲ ಎಂದು ಭಾವಿಸಿ ಪ್ರಾರ್ಥನೆ ಬಗ್ಗೆ ನಿರ್ಲಕ್ಷಿಸುವವರು ನೆನಪಿಡಬೇಕು. ಅವರಿಗೂ ಪರೀಕ್ಷೆಗಳ ಕಾಲ ಬಂದೆರಗಬಹುದಾಗಿದೆ. ಅವರು ತಮ್ಮ ವಿಶ್ವಾಸವನ್ನು ರಕ್ಷಿಸಲು ಅಲ್ಲಾಹನ ಆಶ್ರಯವನ್ನೇ ಪಡೆಯಬೇಕಾಗಬಹುದು. ಅವರು ಪರೀಕ್ಷೆಗಳಿಂದ ರಕ್ಷಿಸಿಕೊಳ್ಳಲು ಹಾಗೆ ಮಾಡಲೇ ಬೇಕಾಗುತ್ತದೆ. ಆದುದರಿಂದ ಅಂತಹ ಸ್ಥಿತಿ ಬಂದೆರಗುವ ಮೊದಲು ಪ್ರಾರ್ಥನೆ ಬಗ್ಗೆ ಗಮನ ಹರಿಸಿರಿ. ಯಾರಿಗಾದರೂ ಈಗ ಬಾಹ್ಯವಾದ ಸುಖ ಸೌಲಭ್ಯಗಳಿದ್ದರೂ ಅಂತಹ ಜನರು ಸಹ ಕಷ್ಟದಲ್ಲಿರುವ ತಮ್ಮ ಅಹ್ಮದಿ ಸಹೋದರರ ಪರವಾಗಿ ನೋವು ಭರಿತರಾಗಿ ಪ್ರಾರ್ಥಿಸಬೇಕು. ಅಲ್ಲಾಹನು ಜಮಾಅತಿಗೆ ಸಂಬಂಧಿಸಿದ ಅವರ ಕಷ್ಟಗಳನ್ನೂ ವೈಯಕ್ತಿಕ ಕಷ್ಟಗಳನ್ನೂ ನಿವಾರಿಸಲಿ ಎಂದು ಪ್ರಾರ್ಥಿಸಬೇಕು.

ಯುರೋಪಿನಲ್ಲಿ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿರುವವರು ಸಹ ತಮ್ಮನ್ನು ಸುರಕ್ಷಿತರೆಂದು ಭಾವಿಸಬಾರದು. ಈಗ ಪಶ್ಚಿಮದ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇಸ್ಲಾಮ್ ವಿರುದ್ಧ ಭಾವನೆಗಳು ತಲೆದೋರಿವೆ. ಅದರಿಂದ ಅಹ್ಮದಿಯರೂ ಪ್ರಭಾವಿತರಾಗುವರು. ನಿಸ್ಸಂಶಯವಾಗಿಯೂ ನಾವು ಹೇಳುತ್ತೇವೆ ಇತರ ಮುಸ್ಲಿಮರು ವರ್ತಿಸುವ ರೀತಿಯಲ್ಲಿ ನಾವು ವರ್ತಿಸುವವರಲ್ಲ ಎಂದು. ನಾವು ಶಾಂತಿ ಭರಿತ ಇಸ್ಲಾಮ್ ಮತ್ತು ಪ್ರೀತಿಸುವ ಇಸ್ಲಾಮ್

ತತ್ವಗಳನ್ನು ಅನುಷ್ಠಾನಕ್ಕೆ ತರುವವರು ಎಂದೂ ಹೇಳುತ್ತೇವೆ. ಈ ದೇಶಗಳಲ್ಲಿ ಎಂತಹ ಘಟನೆಗಳು ಪ್ರಾರಂಭವಾಗಲು ತೊಡಗಿವೆ ಎಂದರೆ ಇಸ್ಲಾಮ್ ವಿರೋಧಿಗಳಾದ ಮತ್ತು ದೇಶಿಯವಾದಿಗಳಾದ ಜನರು ಮುಸ್ಲಿಮರ ವಿರುದ್ಧ ಕೆಲಸ ಮಾಡಲು ಪ್ರಾರಂಭಿಸಿದ್ದಾರೆ.

ಪ್ರಶ್ನೆ ಇರುವುದು ಮುಸ್ಲಿಮರ ಸ್ಥಿತಿಯ ಬಗ್ಗೆ ಅಥವಾ ಅಹ್ಮದಿಯರ ಸ್ಥಿತಿಯ ಬಗ್ಗೆ ಮಾತ್ರವಲ್ಲ. ಸಂಪೂರ್ಣ ಲೋಕದ ಸ್ಥಿತಿ ಹೇಗಿದೆ ಎಂದರೆ ಲೋಕವು ಅಲ್ಲಾಹನ ಕೋಪಕ್ಕೆ ಪಾತ್ರವಾಗಿ ವಿನಾಶದ ಕಡೆಗೆ ಸಾಗುತ್ತಾ ಇದೆ. ಮಹಾಶಕ್ತಿ ರಾಷ್ಟ್ರಗಳು ಮುಸ್ಲಿಮರನ್ನು ಪರಸ್ಪರ ಹೋರಾಡುವಂತೆ ಮಾಡುತ್ತಿವೆ. ನಾನು ಕೆಲವು ವರ್ಷಗಳಿಂದ ಹೇಳುತ್ತಾ ಬಂದಿರುವೆನು, ಮುಸ್ಲಿಮರು ಅವಿವೇಕಿಗಳಾಗಿ ವರ್ತಿಸಿ ಮಹಾಶಕ್ತಿಗಳ ಕೈಗೊಂಬೆಗಳಾಗಿ ತಮ್ಮ ಶಕ್ತಿಯನ್ನು ತಾವೇ ಬಲಹೀನಗೊಳಿಸುತ್ತಿದ್ದಾರೆ. ಅವರು ತಮ್ಮ ದೇಶಗಳನ್ನು ಅನೇಕ ದಶಕಗಳ ಹಿಂದಕ್ಕೆ ತಳ್ಳಿದ್ದಾರೆ. ಈಗ ಕಾಣುತ್ತಿರುವ ಅಮೇರಿಕದ ಕಾರ್ಯಯೋಜನೆ ಬಹಳ ಅಪಾಯಕರವಾಗಿದೆ. ಸಿರಿಯಾದಲ್ಲಿ ಎಂತಹ ಯುದ್ಧದ ಪರಿಸ್ಥಿತಿ ಸೃಷ್ಟಿಸಲಾಗಿದೆ ಮತ್ತು ಸೃಷ್ಟಿಸಲಾಗುವುದು ಎಂದರೆ ಇರಾನ್ ನೇರವಾಗಿ ಸಿರಿಯಾಕ್ಕೆ ಸೈನಿಕ ಸಹಾಯ ತಲಪಿಸುವಂತಾಗುವುದು. ಇರಾನ್ ತನ್ನ ಸೈನ್ಯವನ್ನು ಸಹ ಸಿರಿಯಾಕ್ಕೆ ಕಳುಹಿಸುವ ಸ್ಥಿತಿ ಉಂಟಾಗಬಹುದು. ಆಗ ಅಮೇರಿಕ ಮತ್ತು ಇಸ್ರಾಯೇಲ್ ಇರಾನಿನ ವಿರುದ್ಧ ಸೇಡು ತೀರಿಸಲಿಕ್ಕಾಗಿ ನೇರವಾಗಿ ಯುದ್ಧ ಪ್ರಾರಂಭಿಸಬಹುದು. ದುರದೃಷ್ಟಕರವಾಗಿ ಸೌದಿ ಅರೇಬಿಯಾದ ಸರಕಾರ ಅಮೇರಿಕಕ್ಕೆ ಸಹಾಯ ನೀಡುತ್ತಿದೆ. ಇಸ್ಲಾಮ್ ವಿರುದ್ಧ ಅಮೇರಿಕಕ್ಕಿರುವ ಹಗೆತನವನ್ನು ಅದು ಮುಸ್ಲಿಮ್ ದೇಶಗಳನ್ನು ಬಲಹೀನಗೊಳಿಸುವ ಮೂಲಕ ಸಾಧಿಸುತ್ತಿದೆ. ಆದರೆ ಆ ರೀತಿ ಪ್ರಾರಂಭವಾಗುವ ಯುದ್ಧ ಆ ಪ್ರದೇಶಕ್ಕೆ ಸೀಮಿತವಾಗಿರಲಾರದು. ಎದುರು ಭಾಗದವರ ಸಂರಕ್ಷಣೆಯ ನೆಪದಲ್ಲಿ ರಶ್ಯ ಸಹ ಬಹಿರಂಗವಾಗಿ ಯುದ್ಧ ಪ್ರವೇಶ ಮಾಡುವುದು. ಅದರ ಬಗ್ಗೆ ರಶ್ಯ ಆಗಾಗ ಪ್ರಕಟಿಸುತ್ತಲೂ ಇದೆ. ಈ ಯುದ್ಧ ಜಾಗತಿಕ ಯುದ್ಧದ ರೂಪ ಪಡೆಯಬಹುದು.

ಈಗ ಖತರ್ ದೇಶಕ್ಕೆ ಸಂಬಂಧಿಸಿದ ವಿಷಯವೂ ಇದೆ. ಇದು ಮುಸ್ಲಿಮರು ಪರಸ್ಪರ ಹೋರಾಟ ನಡೆಸುವಂತೆ ಮಾಡುವ ಇನ್ನೊಂದು ಪ್ರಯತ್ನವಾಗಿದೆ. ಭಯೋತ್ಪಾದಕ ಕೃತ್ಯಗಳನ್ನು ಕೊನೆಗೊಳಿಸುವುದಕ್ಕಿಂತಲೂ ಈ ವಿಷಯ ಹೆಚ್ಚು ಮಹತ್ವವನ್ನು ಪಡೆದಿದೆ. ಪಂಥಗಳ ಪರಸ್ಪರ ವಿರೋಧದ ಕಾರಣದಿಂದ ಒಂದು ಅಸೂಯೆ ತಲೆದೋರಿದೆ. ಸಂಪತ್ತನ್ನು ಗಳಿಸುವ ಒಂದು ಪ್ರಯತ್ನ ಸಹ ಇದರಲ್ಲಿದೆ. ತಮ್ಮ ಅಧೀನದಲ್ಲಿರಿಸುವ ಒಂದು ಪ್ರಯತ್ನವೂ ಇದರಲ್ಲಿದೆ. ಅಮೇರಿಕ ಮೊದಲು ಸೌದಿ ಅರೇಬಿಯಾದೊಂದಿಗೆ ಹೇಳಿತು, ನಿಸ್ಸಂಶವಾಗಿ ಖತರ್ ದೇಶದ ವಿರುದ್ಧ ಪ್ರತಿಬಂಧಗಳನ್ನು ಹೇರಿರಿ ಎಂದು. ಅಮೇರಿಕದ ಅಧ್ಯಕ್ಷರ ಭೇಟಿಯ ನಂತರ ಅಮೇರಿಕದ ಅನುಮತಿ ಪಡೆದು ಸೌದಿ ಅರೇಬಿಯಾ ಖತರ್ ವಿರುದ್ಧ ಪ್ರತಿಬಂಧಗಳನ್ನು ಹೇರಿತೆಂದು ಮೀಡಿಯಾಗಳಲ್ಲಿ ವಾರ್ತೆಗಳು ಪ್ರಕಟವಾಗುತ್ತಿದ್ದುವು. ಆದರೆ ಈಗ ಅಮೇರಿಕದ ಸರಕಾರ ಹೇಳುತ್ತಿರುವುದು, ಸೌದಿ ಅರೇಬಿಯಾ ಮತ್ತು ಅದರ ಮಿತ್ರ ದೇಶಗಳು ಬಹಳ ಕಠಿಣ ಶರತ್ತುಗಳನ್ನು ಖತರ್ ಮುಂದೆ ಇರಿಸಿವೆ, ಅವರು ಖತರ್‌ನೊಂದಿಗೆ ಮೃದುವಾಗಿ ವರ್ತಿಸಬೇಕೆಂದು ಹೇಳುತ್ತಿದೆ. ಈಗ ಅಮೇರಿಕ ಖತರ್ ಮೇಲೆ ಸಹ ಕೈ ಹಾಕಲು ಪ್ರಾರಂಭಿಸಿದೆ. 'ನಾವು ಈ ವಿಷಯದಲ್ಲಿ ಸಂಪೂರ್ಣ ನಿಷ್ಪಕ್ಷಪಾತಿಗಳು' ಎಂದು ತೋರಿಸಿ ಕೊಳ್ಳಲಿಕ್ಕಾಗಿ. ಮುಸ್ಲಿಮ್ ದೇಶಗಳ ವಿರುದ್ಧ, ಎಂದರೆ ಇಸ್ಲಾಮಿನ ವಿರುದ್ಧ ಒಂದು ಗೂಢತಂತ್ರ ರೂಪಿಸಲಾಗುತ್ತಿದೆ ಎಂದು ಮುಸ್ಲಿಮ್ ದೇಶಗಳು ಮನವರಿಕೆ ಮಾಡಿಕೊಳ್ಳುವುದಿಲ್ಲ. ನಾವು ಅದರಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು ಎಂದು ಚಿಂತಿಸುವುದಿಲ್ಲ.

ಯುದ್ಧವು ಕೇವಲ ಮಧ್ಯಪೂರ್ವ ದೇಶಗಳ ಅಥವಾ ಅರಬ್ ದೇಶಗಳಿಗೆ ಸಂಬಂಧಿಸಿದ ವಿಷಯ ಮಾತ್ರವಲ್ಲ. ಅಲ್ಲಿಂದ ಮಾತ್ರ ಯುದ್ಧದ ಜ್ವಾಲೆಗಳು ಬಡಿದೆಬ್ಬಿಸಲ್ಪಡುವುವು ಎಂದು ಹೇಳಲಿಕ್ಕಾಗದು. ಅಮೇರಿಕ ಮತ್ತು ಕೊರಿಯದ ಮಧ್ಯೆ ಬಿಕ್ಕಟ್ಟು ದಿನೇ ದಿನೇ ವರ್ಧಿಸುತ್ತಿದೆ. ಲೋಕದ ಸ್ಥಿತಿಯ ಬಗ್ಗೆ ದೃಷ್ಟಿ ಇರಿಸಿದ ವಿಶ್ಲೇಷಕರು ಬಹಿರಂಗವಾಗಿ ಹೇಳುತ್ತಿದ್ದಾರೆ: ಅಮೇರಿಕ ಸಾಮಾನ್ಯವಾದೊಂದು ಆಯುಧವನ್ನು ಬಳಸಿದರೆ ಅಥವಾ ಕಠಿಣ ಕ್ರಮ ಕೈಗೊಂಡರೆ, ಅಥವಾ ಕೊರಿಯಾ ಸಹ ಕೇವಲ ಹೆದರಿಸಲು ಒಂದು ಆಯುಧ ಬಳಸಿದರೆ ಈ ಪ್ರದೇಶದಲ್ಲಿ ಘೋರ ಯುದ್ಧ ಪ್ರಾರಂಭವಾಗುವುದು. ಒಟ್ಟಿನಲ್ಲಿ ಈಗ ಲೋಕದಲ್ಲಿ ಬಹಳ ಭಯಾನಕ ಸ್ಥಿತಿ ಇದೆ. ಚೀನ ಕೊರಿಯಾದ ಬೆಂಬಲಿಗನಾದರೂ ಇಂದಿನ ಪರಿಸ್ಥಿತಿಯ ದುರವಸ್ಥೆಯನ್ನು ಪರಿಗಣಿಸಿ ಕೊರಿಯಾ ದೇಶಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದೆ. ಅಮೇರಿಕಕ್ಕೂ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದೆ. ಸೈಬರ್ ಆಕ್ರಮಣಗಳು ಸಹ ಭಯಂಕರವಾಗಿವೆ. ಅವು ಸಹ ವಿನಾಶವನ್ನುಂಟು ಮಾಡುವವುಗಳಾಗಿವೆ. ನ್ಯಾಟೋದ ಒಬ್ಬ ಪ್ರತಿನಿಧಿ ಹೇಳಿದ್ದಾರೆ: ನ್ಯಾಟೋದ ಮೇಲೆ ಮತ್ತು ಬೇರೆ ಸಂಸ್ಥೆಗಳ ಮೇಲೆ ಸೈಬರ್ ಆಕ್ರಮಣ ನಡೆದರೆ ಒಂದು ವಿನಾಶಕಾರಿ ಯುದ್ಧಕ್ಕೆ ಅದು ಹೇತುವಾಗಬಹುದೆಂದು. ಇಂತಹ ಆಕ್ರಮಣಗಳನ್ನು ನಾವು ಇನ್ನಷ್ಟು ಸಹಿಸಲಾರೆವು ಎಂದು ಹೇಳುತ್ತಾರೆ.

ಲೋಕವು ತನ್ನ ವಿನಾಶದ ಸಾಮಗ್ರಿಗಳನ್ನು ಸ್ವತಃ ನಿರ್ಮಿಸುತ್ತಾ ಇದೆ. ಲೌಕಿಕ ಅಭಿವೃದ್ಧಿ ಅವರ ಸಂರಕ್ಷಣೆಗೆ ಖಾತರಿಯಾಗಿದೆ ಎಂದು ಭಾವಿಸುತ್ತಾರೆ. ಆದರೆ ಅದು ಅವರ ನಾಶಕ್ಕೆ ಕಾರಣವಾಗಬಹುದಾಗಿದೆ. ಲೌಕಿಕವಾದಿಗಳಾದ ನಾಯಕರು ತಮ್ಮ ಸ್ವಾರ್ಥ ಹಿತಾಸಕ್ತಿಗಳ ಬಗ್ಗೆ ಮಾತ್ರ ಗಮನಿಸುವವರೂ ಅನ್ಯರ ಬಗ್ಗೆ ನಿರ್ಲಕ್ಷಿಸುವವರೂ ಆಗಿದ್ದಾರೆ. ಲೋಕದ ಬಹಳ ದೊಡ್ಡ ಶಕ್ತಿಯುತ ದೇಶದ ಅಧ್ಯಕ್ಷ ತನ್ನ ಸ್ಥಾನದಲ್ಲಿ ಕುಳಿತು ಗಾಳಿ ಮಾತುಗಳನ್ನು ಹೇಳಿ ಲೋಕ ಈಗ ನಾನು ಹೇಳಿದ ಪ್ರಕಾರ ನಡೆಯುವುದು ಎಂದು ಭಾವಿಸುತ್ತಿದ್ದಾರೆ. ಅವರ ಮಾತುಗಳು ಲೋಕದ ಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವುದು. ಒಂದು ವಿಷಯ ಸ್ಪಷ್ಟವಾಗುತ್ತದೆ– ಈ ವ್ಯಕ್ತಿ ತನ್ನ ಅಹಂಭಾವದ ಕಾರಣದಿಂದ ತನ್ನ ಪ್ರತಿಯೊಬ್ಬ ವಿರೋಧಿಯನ್ನೂ ಮುಸ್ಲಿಮರನ್ನೂ ತಾತ್ಸಾರ ಭಾವನೆಯಿಂದ ಕಾಣುವುದರಿಂದ ಮುಸ್ಲಿಮರನ್ನು ನಾಶ ಮಾಡಲು ಉದ್ದೇಶಿಸುತ್ತಿದ್ದಾರೆ. ಆದರೆ ಲೋಕದಲ್ಲಿ

ತಲೆದೋರುವ ವಿವಿಧ ಪರಿಸ್ಥಿತಿಗಳ ಭಯಾನಕ ಪರಿಣಾಮಗಳಿಂದ ತಾನು ಸಹ ಸುರಕ್ಷಿತನಾಗಿರಲಾರ ಎಂದು ಆ ವ್ಯಕ್ತಿ ತಿಳಿದುಕೊಳ್ಳುವುದಿಲ್ಲ.

ಇಸ್ಲಾಮಿನ ಕೇಂದ್ರದ ದೊರೆ ಸಹ ವಿಶ್ವಾರ್ಹನಾಗಿಲ್ಲ ಎಂಬುದು ಮುಸ್ಲಿಮರ ದುರದೃಷ್ಟವಾಗಿದೆ. ಅವರು ತನ್ನ ಸ್ವಾರ್ಥಕ್ಕೋಸ್ಕರ ಮತ್ತು ತನ್ನ ಪ್ರದೇಶದಲ್ಲಿ ಹೆಮ್ಮೆ ಕೊಚ್ಚಿಕೊಳ್ಳಲು ಮುಸ್ಲಿಮೇತರರ ಮಡಿಲಲ್ಲಿ ಬಿದ್ದು ಇಸ್ಲಾಮನ್ನು ಬಲಹೀನಗೊಳಿಸುತ್ತಿದ್ದಾರೆ.

**ಲೋಕವು ಈಗ ಯುದ್ಧಗಳ ವಿನಾಶದಿಂದ ರಕ್ಷಿಸಲ್ಪಡಲಿರುವ ಒಂದೇ ಒಂದು ಮಾರ್ಗವು ಪ್ರತಿಯೊಬ್ಬ ಅಹ್ಮದಿ ನೋವಿನಿಂದ ಭರಿತನಾಗಿ ಮಾನವರನ್ನು ರಕ್ಷಿಸಬೇಕೆಂದು ಅಲ್ಲಾಹನೊಂದಿಗೆ ಮಾಡುವ ಪ್ರಾರ್ಥನೆ ಮಾತ್ರವಾಗಿದೆ.** ಈಗ ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿದೆ (ಫರ್ಝ್ ಆಗಿದೆ): ಲೋಕದಲ್ಲಿ ವಾಸಿಸುವ ಜನರ ನೋವನ್ನು ಮನವರಿಕೆ ಮಾಡಿಕೊಂಡು, ಬರಲಿರುವ ಕಷ್ಟಗಳನ್ನೂ ವಿಪತ್ತುಗಳನ್ನೂ ಮನವರಿಕೆ ಮಾಡಿಕೊಂಡು – ಅವುಗಳು ಸಂಭವಿಸುವ ಕುರಿತು ಪ್ರಜ್ಞೆ ಸಹ ಅನ್ಯರಿಗೆ ಇಲ್ಲದಿದ್ದರೂ – ಅವರಿಗೋಸ್ಕರ ಪ್ರಾರ್ಥಿಸಬೇಕಾದುದು ನಮ್ಮ ಹೊಣೆಗಾರಿಕೆಯಾಗಿದೆ. ಮುಸ್ಲಿಮ್ ಸಮುದಾಯಕ್ಕೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಅವರು ತಮ್ಮ ಸ್ಥಾನವನ್ನು ಅರಿತುಕೊಳ್ಳುವಂತಾಗಲಿ. ಅವರು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಳ್ಳುವಂತಾಗಲಿ. ಅವರು ಇಸ್ಲಾಮ್ ವಿರೋಧಿ ಶಕ್ತಿಗಳ ಜೋಳಿಗೆಗಳಿಗೆ ಬೀಳದಂತಾಗಲಿ. ಅಲ್ಲಾಹನು ಅವರ ಸಂರಕ್ಷಣೆಗೆ ಮತ್ತು ಅಭಿವೃದ್ಧಿಗೆ ನಿಯೋಜಿಸಿ ಕಳುಹಿಸಿದ ಮಹಾನುಭಾವರನ್ನು ಅವರು ನಂಬುವವರಾಗಲಿ. ಇದೇ ರೀತಿ ಮಾನವ ಕುಲವನ್ನು ರಕ್ಷಿಸಬೇಕೆಂದು ಸಹ ನೋವಿನಿಂದ ಭರಿತರಾಗಿ ಪ್ರಾರ್ಥಿಸಿರಿ. ಯುದ್ಧಗಳು ದೂರ ಸರಿಯಲಿ ಎಂದು ಪ್ರಾರ್ಥಿಸಿರಿ. **ಪ್ರಾರ್ಥನೆ ಮತ್ತು ದಾನ ಧರ್ಮಗಳಿಂದ ವಿಪತ್ತುಗಳು ದೂರ ಸರಿಯುತ್ತವೆ.** ಲೋಕವು ಸುಧಾರಣೆಯನ್ನು ಹೊಂದಲು ಒಲವು ಪ್ರಕಟಿಸುವುದಾದರೆ ಈ ಯುದ್ಧಗಳು ಸಹ ದೂರ ಸರಿದು ಹೋಗಬಲ್ಲವು. ಲೋಕದ ಒಂದು ಭಾಗ ನಾಶವಾಗಿ ಅನಂತರ ಉಳಿದವರಿಗೆ ಬುದ್ಧಿ ಬಂದು ಅವರು ಅಲ್ಲಾಹನ ಕಡೆಗೆ ಬಾಗಿ, ಆಗಮಿಸಿದ ಮಹಾನುಭಾವರನ್ನು ನಂಬುವಂತಾಗಲಿ ಎಂಬ ಮಾತಿನಲ್ಲಿ ನಾವು ಸಂತೋಷಪಡುವುದಿಲ್ಲ. ನಾವು ಸಂತೋಷಪಡುವುದು ಮತ್ತು ಪ್ರಯತ್ನ ಮಾಡುವುದು ಮತ್ತು ಪ್ರಾರ್ಥಿಸುವುದು ಏನೆಂದರೆ, ಅಲ್ಲಾಹನು ಯಾರನ್ನೂ ಕೆಟ್ಟ ಕೆಲಸಗಳ ಕಾರಣದಿಂದ ನಾಶಗೊಳಿಸದಿರಲಿ ಎಂದಾಗಿದೆ. ಲೋಕಕ್ಕೆ ಅದರ ದುಷ್ಕೃತ್ಯಗಳ ಪರಿಣಾಮಗಳ ಬಗ್ಗೆ ಅರಿವು ಲಭಿಸಿ ಅದರಿಂದ ರಕ್ಷಣೆ ಹೊಂದುವಂತೆ ವಿವೇಕವುಂಟಾಗಲಿ ಎಂದೂ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗುಲಾಮರಾದ ನಮ್ಮ ಕೆಲಸ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧವನ್ನು ಜೋಡಿಸಿಕೊಳ್ಳುವುದರಿಂದಲೇ ಸಂರಕ್ಷಣೆಯ ಕೋಟೆಯಲ್ಲಿ ಪ್ರವೇಶಿಸಬಹುದು ಎಂಬ ಸಂದೇಶ ಸಾರ್ವಜನಿಕವಾಗಿ ಪ್ರಕಟಿಸುವುದಾಗಿದೆ. ನಾವು ಜನರಿಗೋಸ್ಕರ ಪ್ರಾರ್ಥಿಸುವೆವು. ನಮ್ಮ ಪ್ರಾರ್ಥನೆಗಳ ಮೂಲಕ ಜನರಿಗೆ ಬುದ್ಧಿಯನ್ನು ಅಲ್ಲಾಹನು ನೀಡಲಿ ಎಂದೂ ಅಲ್ಲಾಹನು ಅವರನ್ನು ವಿನಾಶದ ಹೊಂಡದಿಂದ ರಕ್ಷಿಸಲಿ ಎಂದೂ ನಾವು ಪ್ರಾರ್ಥಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರಾರ್ಥನೆ ಬಹಳ ದೊಡ್ಡ ಸಂಪತ್ತಾಗಿದೆ ಮತ್ತು ಶಕ್ತಿಯಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅನೇಕ ಸ್ಥಳಗಳಲ್ಲಿ ಅದರ ಬಗ್ಗೆ ಗಮನ ಹರಿಸಲಾಗಿದೆ. ಪ್ರಾರ್ಥನೆ ಮೂಲಕ ಕಷ್ಟಗಳಿಂದ ಪಾರಾದವರ ಘಟನೆಗಳನ್ನೂ ವಿವರಿಸಲಾಗಿದೆ. ಪ್ರವಾದಿಗಳ ಜೀವಿತದ ಬೇರು ಮತ್ತು ಅವರ ಜಯಗಳ ಮೂಲ ಕಾರಣ ಮತ್ತು ಸತ್ಯವಾದ ಮಾರ್ಗ ಈ ಪ್ರಾರ್ಥನೆಯೇ ಆಗಿದೆ. ನಾನು ಉಪದೇಶಿಸುತ್ತೇನೆ– ನೀವು ನಿಮ್ಮ ವಿಶ್ವಾಸದ ಮತ್ತು ಕರ್ಮಗಳ ಶಕ್ತಿಯನ್ನು ವರ್ಧಿಸಲು ಪ್ರಾರ್ಥನೆಯಲ್ಲಿ ತಲ್ಲೀನರಾಗಿರಿ. ಪ್ರಾರ್ಥನೆ ಮೂಲಕ ಎಂತಹ ಬದಲಾವಣೆ ಉಂಟಾಗುವುದೆಂದರೆ ಅಲ್ಲಾಹನ ಅನುಗ್ರಹದಿಂದ ಅಂತಿಮ ಗತಿ ಉತ್ತಮವಾಗುವುದು. ಅಲ್ಲಾಹನು ನಮ್ಮೆಲ್ಲರ ಅಂತಿಮ ಗತಿ ಉತ್ತಮಗೊಳಿಸುವವನಾಗಲಿ. ನಾವು ಶೈತಾನನ ಜೋಳಿಗೆಗೆ ಎಂದೂ ಬೀಳುವವರಾಗದಿರಲಿ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಪ್ರಕಾರ ಜೀವಿಸುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 30-06-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon